



# ಕೋಟ ಸಾಹಿತಿಗಳ ಹಸೀ ಕಸಾಪ!

**ಕೋಟದಲ್ಲಿ ಶಿವರಾಮ ಕಾರಂತರಿಲ್ಲ ಅನ್ನೋದನ್ನು ಕನ್ಫರ್ಮ್ ಮಾಡಿಕೊಂಡೇ ಇವರೆಲ್ಲ ಅಲ್ಲಿಗೆ ಹೋಗಿರೋದು ಕಣಪ್ಪಾ..!**

★ ಬಿ.ಎಂ. ಹನೀಫ್




**'ಸಾರ್.. ಈ ಸಾಹಿತಿಗಳನ್ನು ನಂಬೋ ಹಾಗಿಲ್ಲ..'**

—ಯಂಕ್ಟೇಶ ಮನೆಯೊಳಕ್ಕೆ ನುಗ್ಗಿ ಬರುತ್ತಿದ್ದಂತೆಯೇ ಆತನ ಗಟ್ಟಿ ಧ್ವನಿಯೂ ಮೊಳಗಿತು. ಯಂಕ್ಟೇಶನ ಸ್ಟೈಲೇ ಹಾಗೆ. ಮನೆಯೊಳಕ್ಕೆ ಬರುವುದಕ್ಕೆ ಮುನ್ನವೇ ಆತನ ಧ್ವನಿಯೂ ಮೊಳಗುತ್ತದೆ. ತನಗನ್ನಿಸಿದ್ದನ್ನು ಮುಲಾಜಿಲ್ಲದೆ ನೇರವಾಗಿ ಹೇಳುವ ಯಂಕ್ಟೇಶನ ಸ್ಟೈಲು ನನಗೂ ಇಷ್ಟವೇ. ಆದರೆ ಮನೆಯೊಳಕ್ಕೆ ಬರುವಾಗ ಒಂದು ನಮಸ್ಕಾರ ಒಗೆದು, ನಿಧಾನಕ್ಕೆ ನಗುತ್ತಾ ಬಂದು ಕುಳಿತು, ಸ್ವಲ್ಪ ನೀರು ಕುಡಿದು ಇದನ್ನೇ ಸಾವಧಾನವಾಗಿ ಹೇಳಬಹುದಲ್ಲ... ಎಂದರೆ ಯಂಕ್ಟೇಶನ ವಾದವೇ ಬೇರೆ–– 'ಸ್ಪೀಡ್ ಇರಬೇಕು ಸಾ! ಯಾವುದನ್ನೂ ಹೇಳೋದಕ್ಕೆ ನಿಧಾನ ಮಾಡಬಾರದು. ಇಲ್ಲಾಂದ್ರೆ ಬೇರೆಯವರು ಅದನ್ನೇ ಹೇಳಿಬಿಟ್ಟಿರ್ತಾರೆ!'

'ಯಾವ ಸಾಹಿತಿಗಳು? ಯಾವ ಪಂಥದವರು? ನವ್ಯದವರೋ, ನವೋದಯದವರೋ, ದಲಿತ ಬಂಡಾಯದವರೋ...? ಯಾಕೆ ನಂಬೋ ಹಾಗಿಲ್ಲ..? ಸರಿಯಾಗಿ ವಿಷಯ ಹೇಳಪ್ಪಾ...' ಎಂದೆ.

'ಖೋಟಾ ಸಾಹಿತಿಗಳು ಸಾ....!' ಎಂದ.

ನನಗೆ ದಿಗಿಲಾಯಿತು. ಇದ್ಯಾವುದಪ್ಪಾ ಹೊಸ ಸಾಹಿತ್ಯ ಪಂಥ? ನವೋದಯ, ನವ್ಯ, ನವ್ಯೋತ್ತರ, ಬಂಡಾಯ, ದಲಿತ, ಧಾರವಾಡ್, ಬೆಂಗ್ಳೂರ್, ಜೈಪುರ್ ಸಾಹಿತ್ಯ ಎಲ್ಲವೂ ಗೊತ್ತು. ಇದ್ಯಾವುದೋ ಖೋಟಾ ಸಾಹಿತಿಗಳು ಎಂಬ ಪಂಥ ನನಗೇ ಗೊತ್ತಿಲ್ಲದಂತೆ ಹುಟ್ಟಿದ್ಯಾ.... ಎಂದು ಆಶ್ಚರ್ಯವೂ ಆಯಿತು.

'ಸರಿಯಾಗಿ ಹೇಳಪ್ಪ.. ಖೋಟಾ ಸಾಹಿತಿಗಳೆಂದರೆ ಯಾರು?'

'ಅದೇ ಸಾ... ಮೊನ್ನೆ ಕುಂದಾಪುರದಲ್ಲಿ ಪ್ರತ್ಯೇಕ ಸಭೆ ಸೇರಿದ್ರಲ್ಲಾ.. ಕಸಾಪದವರು..'

ಅಯ್ಯೋ ನನ್ನ ಕರ್ಮವೇ, ಇವನಿಗೆ ಹತ್ತು ವರ್ಷ ಕನ್ನಡ ಕಲಿಸಿಯೂ ಏನೂ ಪ್ರಯೋಜನವಾಗಲಿಲ್ಲವಲ್ಲ.. ಅಲ್ಪಪ್ರಾಣ, ಮಹಾಪ್ರಾಣದ ವ್ಯತ್ಯಾಸವೇ ಗೊತ್ತಿಲ್ಲವಲ್ಲ... ಎಂದುಕೊಂಡೆ. ಅದನ್ನೇ ಸಿಟ್ಟಿನಲ್ಲಿ ಹೇಳಿದರೆ, 'ನೀವೇ ತಾನೇ ಸ್ಕೂಲಲ್ಲಿ ಕನ್ನಡ ಕಲಿಸಿದೋರು' ಎಂದು ನನಗೇ ಆವಾಜ್ ಹಾಕುತ್ತಾನೆ. ನನ್ನ ಸಿಟ್ಟನ್ನು ಅದುಮಿಕೊಂಡು ಸಮಾಧಾನದಿಂದ ಹೇಳಿದೆ:–

'ಅದು ಖೋಟಾ ಅಲ್ಲಪ್ಪಾ, ಕೋಟ. ನಮ್ಮ ಶಿವರಾಮ ಕಾರಂತರು ಹುಟ್ಟಿದ ಊರು.'

ಅದೇ ಸಾರ್. ಅಲ್ಲಿಗೆ ಹೋಗಿ ಈ ಸಾಹಿತಿಗಳೆಲ್ಲ ಸೇರಿ ಕಸಾಪ ಅಧ್ಯಕ್ಷರ ಅವಧಿ ಐದು ವರ್ಷಕ್ಕೆ ಏರಿಸಿಕೊಂಡು ಬಂದಿದ್ದಾರಲ್ಲ, ಇವರನ್ನು ನಂಬೋ ಹಾಗಿಲ್ಲ.. ಎಂದ ಯಂಕ್ಟೇಶ.

'ನಂಬಲೇಬೇಕು ಕಣಯ್ಯಾ. ಅವ್ರು ಬೈ ಲಾ ತಿದ್ದುಪಡಿ ಮಾಡಿ ಅದನ್ನು ಬರ್ಕೊಂಡೇ ಬಂದಿದ್ದಾರೆ' ಎಂದೆ.

'ಇವ್ರಿಗೆ ಬೈಲಾ ತಿದ್ದೋಕೆ ಅಧಿಕಾರ ಕೊಟ್ಟವರು ಯಾರು ಸಾ..? ಹೀಗೆ ತಮ್ಮ ಅಧಿಕಾರದ ಅವಧಿಯನ್ನು ತಾವೇ ನಿರ್ಧರಿಸಿ ಹೆಚ್ಚಿಸಿಕೊಳ್ಳೋದು ಸರೀನಾ...? ನಾಳೆ ಸಿಎಮ್ಮು ಸಿದ್ರಾಮಣ್ಣ ಕೂಡಾ ಹೀಗೆ ಮಾಡಬಹುದಾ?' ಯಂಕ್ಟೇಶ ಲಾ ಪಾಯಿಂಟು ಒಗೆದ.

'ಅಯ್ಯೋ ಇದೆಲ್ಲ ಈಗ ಸಾಮಾನ್ಯ ಕಣಯ್ಯಾ. ಚೀನಾದಲ್ಲಿ ಮೊನ್ನೆ ಏನಾಯ್ತು? ಅಲ್ಲಿನ ಅಧ್ಯಕ್ಷರು ತಮ್ಮನ್ನು ಆಜೀವ ಅಧ್ಯಕ್ಷರು ಎಂದು ಸಂವಿಧಾನ ತಿದ್ದುಪಡಿ ಮಾಡಿ ಘೋಷಿಸಿಕೊಂಡಿಲ್ಲವೆ? ರಷ್ಯಾದಲ್ಲಿ ಅಧ್ಯಕ್ಷ ಪುಟಿನ್ ನಾಲ್ಕನೇ ಅವಧಿಗೆ ಆಯ್ಕೆಯಾಗಿ ಇನ್ನೂ ಆರು ವರ್ಷ ಅಧ್ಯಕ್ಷ ಹುದ್ದೆಯಲ್ಲೇ ಮುಂದುವರಿಯುವ ನಿರ್ಧಾರ ಮಾಡಿಲ್ಲವೆ? ಇದೂ ಹಾಗೇ ಅಂದುಕೋ..' ಎನ್ನುತ್ತಾ ವಿಷಯವನ್ನು